# ಬಿಸಿಲ ನಾಡಲ್ಲಿ ಹಸಿರಾದ ತಿಮ್ಮಕ್ಕನ ಹೆಸರು

**ಸಾಲುಮರಗಳ ತಾಯಿ ತಿಮ್ಮಕ್ಕನ ಹೆಸರಿನಲ್ಲಿ ಕೊಪ್ಪಳದ ಬಿಸಿಲುಸೀಮೆಯಲ್ಲಿ ರೂಪುಗೊಂಡಿರುವ ಉದ್ಯಾನವನ ಪರಿಸರಪ್ರೇಮ ಹಾಗೂ ಸಾಮಾಜಿಕ ಕಾಳಜಿಯ ಅಭಿವ್ಯಕ್ತಿಯ ದೃಷ್ಟಿಯಿಂದ ಮುಖ್ಯವಾದುದು. ಈ ಉದ್ಯಾನದ ಮೂಲಕ ರಾಜ್ಯದ ಪ್ರವಾಸೋದ್ಯಮ ನಕ್ಷೆಯಲ್ಲಿ ಹೊಸತೊಂದು ಆಕರ್ಷಣೆ ಸೇರ್ಪಡೆಯಾದಂತಾಗಿದೆ.**

■ ಕುಬೇರ ಮಜ್ಜಿಗಿ

ಇಲ್ಲಿರುವ ಪ್ರಾಣಿ, ಪಕ್ಷಿಗಳು ಚಲಿಸುವುದಿಲ್ಲ! ಗಿಡ–ಮರಗಳು ಗಾಳಿಗೆ ಬಾಗುವುದಿಲ್ಲ! ಬಾಯಿ ತೆರೆದು ನಿಂತ ಮೃಗಗಳು ನಿಮ್ಮನ್ನು ಕಚ್ಚಲಾರವು!

ಇವು ನಿಜವಾದ ಪ್ರಾಣಿ, ಪಕ್ಷಿಗಳಲ್ಲ. ಮಾನವ ನಿರ್ಮಿತ ಶಿಲಾ ಗೊಂಬೆಗಳು. ಕೊಪ್ಪಳದಿಂದ ಹೊಸಪೇಟೆಗೆ ಹೋಗುವ ರಸ್ತೆಯಲ್ಲಿ ಬರುವ ರುದ್ರಾಪುರ (ಕಿರ್ಲೋಸ್ಕರ್ ಕಾರ್ಖಾನೆ) ಪಕ್ಕದ ಹೀರೆಕಾಸನಕಂಡಿ ಅರಣ್ಯ ಪ್ರದೇಶದಲ್ಲಿ ಇಂಥದೊಂದು ಉದ್ಯಾನ ನಿರ್ಮಾಣವಾಗಿದೆ.

ಕೊಪ್ಪಳ ಎಂದರೆ ಬರ ಹಾಗೂ ಬಿಸಿಲಿಗೆ ಹೆಸರುವಾಸಿ. ಬಿಸಿಲು ಸಮೃದ್ಧವಾದ ಈ ಪರಿಸರದಲ್ಲಿ ಅರಣ್ಯ ಇಲಾಖೆ ಇತ್ತೀಚೆಗೆ ಸಾಲು ಮರಗಳ ತಾಯಿ ತಿಮ್ಮಕ್ಕನ ಹೆಸರಿನಲ್ಲಿ 'ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್' ರೂಪಿಸಿದೆ. ಈ ಹಸಿರುಸಿರಿ ಸಹೃದಯರ ಕಣ್ಣುಗಳಿಗೆ ತಂಪೆರೆಯುವಂತಿದೆ. ನಾಡಿನ ಮೂಲೆ ಮೂಲೆಗಳಿಂದ ಪ್ರವಾಸಿಗರು ಈ ಉದ್ಯಾನಕ್ಕೆ ಭೇಟಿ ನೀಡುತ್ತಿದ್ದಾರೆ. ಇದರಿಂದ ಕರ್ನಾಟಕದ ಪ್ರವಾಸೀ ನಕ್ಷೆಯಲ್ಲಿ ಕೊಪ್ಪಳಕ್ಕೊಂದು ವಿಶೇಷ ಸ್ಥಾನ ದಕ್ಕಿದಂತಾಗಿದೆ.

ಹಾವೇರಿ ಜಿಲ್ಲೆಯ ಗೋಟಗೋಡಿಯಲ್ಲಿನ ರಾಕ್ ಗಾರ್ಡನ್ ಈಗಾಗಲೇ ಅಪಾರ ಜನಪ್ರಿಯತೆ ಗಳಿಸಿದೆ. ಇದೇ ಮಾದರಿಯಲ್ಲಿ ತಿಮ್ಮಕ್ಕ ಉದ್ಯಾನವನ್ನು ರೂಪಿಸಲಾಗಿದೆ. ಕೊಪ್ಪಳ ತಾಲ್ಲೂಕಿನ ರುದ್ರಾಪುರ–ಕಾಸನಕಂಡಿ ಗ್ರಾಮದ ಬಳಿ ಅರಣ್ಯ ಇಲಾಖೆಯು ಈ ಉದ್ಯಾನವನ್ನು ರೂಪಿಸಿದೆ.

### ರಸಿಕರ ಕಂಗಳ ಸೆಳೆಯುವ ನೋಟ

ಪರಿಸರ ಪ್ರೇಮದ ಜೊತೆಗೆ ಸಾಮಾಜಿಕ ಕಾಳಜಿ ಕೂಡ ಈ ಉದ್ಯಾನ ನಿರ್ಮಾಣದ ಹಿಂದಿದೆ. ಆ ಕಾರಣದಿಂದಲೇ ಗಾಂಧೀಜಿಯ ಮೂರು ಕೋತಿಗಳ ಸಂದೇಶ ಉದ್ಯಾನದ ಆರಂಭದಲ್ಲೇ ಇದೆ. 'ಕೆಟ್ಟದನ್ನು ಕೇಳಬೇಡ, ಕೆಟ್ಟದನ್ನು ಮಾತನಾಡಬೇಡ, ಕೆಟ್ಟದನ್ನು ನೋಡಬೇಡ' ಎಂಬ ಮೂರು ಕೋತಿಗಳು ಉದ್ಯಾನದ ಮುಖ್ಯದ್ವಾರದ ಮೇಲೆ ಕುಳಿತು ಪ್ರವಾಸಿಗರನ್ನು ಸ್ವಾಗತಿಸುತ್ತವೆ. ಒಳ ಹೋಗುತ್ತಿದ್ದಂತೆ ಒಂದೆರಡು ಹೆಜ್ಜೆ ಮುಂದೆ ಸಾಗಿದರೆ, ಬಲ ಭಾಗದಲ್ಲಿ 'ಮರವನ್ನು ಕಡಿಬೇಡಿ' ಎನ್ನುವ ಸಂದೇಶ ಸಾರುತ್ತ ಅಪ್ಪಿಕೊಂಡಿರುವ ಪುತಾಣಿ ಮಕ್ಕಳು ಎದುರಾಗುತ್ತಾರೆ. 'ಮರ ಉಳಿಸಿ ಕಾಡು ಬೆಳೆಸಿ' ಎಂದು ಪ್ರವಾಸಿಗರಿಗೆ ಸಂದೇಶ ಸಾರುವ ದೃಶ್ಯಗಳು ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ.

ಎಡ ಭಾಗದಲ್ಲಿ ನವಿಲು ರೆಕ್ಕೆ ಬಿಚ್ಚಿ ಕುಣಿದಾಡುವ ದೃಶ್ಯ ನೋಡುಗರನ್ನು ಹಿಡಿದಿಟ್ಟುಕೊಳ್ಳುತ್ತದೆ. ಹಾಗೇ ಮುಂದೆ ಸಾಗಿದರೆ, ಬೃಹತ್ ಗಾತ್ರದ

